ಅ) ರಾಜ್ಯದ ವಿವಿಧ ನಗರಸಭೆಗಳಿಗೆ ಡೆವಲಪ್ಮೆಂಟ್ ಗ್ರಾಂಟ್ ಅನ್ನು ಅನುದಾನವನ್ನಾಗಿ ಕೊಡಲು ಸರ್ಕಾರ ಎಷ್ಟು ಹಣವನ್ನು ನಿಗದಿ ಮಾಡಿರುವುದು?

ಆ) ಈವರೆಗೆ, ಎಷ್ಟು ನಗರಸಭೆಗಳಿಗೆ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲಾಗಿರುವುದು?

ಇ) 1992-93ನೇ ಹಾಗೂ 1993-94ನೇ ಸಾಲಿನಲ್ಲಿ ಮಂಡ್ಯ ನಗರಸಭೆಗೆ ಅಭಿವೃದ್ಧಿ ಅನುದಾನವನ್ನು (ಡೆವಲಪ್ಮೆಂಟ್ ಗ್ರಾಂಟ್) ಬಿಡುಗಡೆ ಮಾಡದೇ ಇರಲು ಕಾರಣಗಳೇನು?

ಈ) ಮಂಡ್ಯ ನಗರಸಭೆಗೆ ಈ ಅಭಿವೃದ್ಧಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು);

ಅ) 1993-94ನೇ ಸಾಲಿನ ಆಯವ್ಯಯದಲ್ಲಿ ರೂ.250.00ಲಕ್ಷಗಳನ್ನು ಒದಗಿಸಲಾಗಿತ್ತಲ್ಲದೇ ಸುಮಾರು ರೂ.90.00 ಲಕ್ಷಗಳನ್ನು ಹೆಚ್ಚಿಗೆ ಒದಗಿಸಲಾಗಿದೆ.

ಆ) ಒಟ್ಟು ಈವರೆಗೆ 7 ನಗರಸಭೆಗಳಿಗೆ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) 1992-93ನೇ ಸಾಲಿನಲ್ಲಿ ಬಿಡುಗಡೆ ಮಾಡಿಲ್ಲ. ಆದರೆ, 1993-94ನೇ ಸಾಲಿನಲ್ಲಿ ರೂ. 10.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

L.I.G. Houses & M.I.G. Houses in Channapatna.

91- Sri. Sadath Ali Khan, (Channapatna) :

Will the Minister for Housing be please to state

1. *Whether is has come to the notice of the Government that the demand for LIG and MIG houses in Channapatna Taluk.*
2. *If so, the action taken by the Government to construct additional MIG and LIG houses from the KHB in Channapatna Taluk.*
3. *When it will be constructed?*

Sri. Gopinatha Sandra (Minister for Housing) :

1. Yes

2. The Housing Board has taken up construction of 74 LIG and 82 MIG houses in Channapatna under I Phase. The Board is also contemplating construction of additional houses under II Phase.

3. Construction will be taken up on obtaining loan assistance from HUDCO.

ವಿದ್ಯಾರ್ಥಿನಿಲಯ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯದ ನಿರ್ಮಾಣ ಕುರಿತು.

89-ಶ್ರೀ ಸಾದತ್ ಆಲಿ - (ಚನ್ನಪಟ್ಟಣ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಪ್ರತ್ಯೇಕವಾಗಿ ಬಾಲಕ:ಬಾಲಕಿಯರಿಗಾಗಿ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಕಟ್ಟುವ ಪ್ರಸ್ತಾವನೆಗಳಿವೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಗುರುತಿಸಲ್ಪಟ್ಟ ಪಟ್ಟಣ ಮತ್ತು ಗ್ರಾಮಗಳಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಕಟ್ಟಲು ಭೂಮಿಯನ್ನು ಕಾಯ್ದಿರಿಸಲಾಗುತ್ತಿದೆಯೇ?

ಈ) ಹಾಗಿದ್ದಲ್ಲಿ, ಸರ್ಕಾರವು ಕಾಯ್ದಿರಿಸಿದ ನಿವೇಶನಗಳಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಕಟ್ಟಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಚನ್ನಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿಯ ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಕಟ್ಟುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಕಟ್ಟಡದ ಕಾಮಗಾರಿಗಾಗಿ 10.11 ಲಕ್ಷಕ್ಕೆ ಅಂದಾಜು ನಕ್ಷೆಯನ್ನು ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಕೇಳಿದ್ದು, ಅಂದಾಜು ಮತ್ತು ನಕ್ಷೆಯನ್ನು ಪಡೆದ ನಂತರ ಕಾಮಗಾರಿಯನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಇ) ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಕಟ್ಟಲು ಪ್ರತ್ಯೇಕವಾಗಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಭೂಮಿಯನ್ನು ಕಾಯ್ದಿರಿಸುತ್ತಿಲ್ಲ. ಕಟ್ಟಡಗಳಿಗೆ ಅಗತ್ಯವಾಗಿ ಬೇಕಾದ ನಿವೇಶನಗಳನ್ನು ಲಭ್ಯತೆಯ ಮೇಲೆ ಪಡೆಯಲಾಗುತ್ತಿದೆ. ಇದುವರೆವಿಗೆ ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ, ಕೋಡಂಬಳ್ಳಿ ನಾಗವಾರಗಳಿಗೆ ನಿವೇಶನಗಳನ್ನು ಪಡೆದಿದೆ.

ಈ) ಕೋಡಂಬಳ್ಳಿ ಬಾಲಕರ ವಿದ್ಯಾರ್ಥಿನಿಲಯಕ್ಕೆ ಕಟ್ಟಡವನ್ನು ಕಟ್ಟುವ ಸಲುವಾಗಿ ಕೇಂದ್ರ ಸರ್ಕಾರದಿಂದ ನೆರವನ್ನು ಕೋರಲಾಗುತ್ತಿದೆ. ಕೇಂದ್ರ ಸರ್ಕಾರದ ಅನುದಾನ ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಚನ್ನಪಟ್ಟಣದ ತಗಚಗೆರೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಮಳಿಗೆಗಳನ್ನು ತೆರೆಯುವ ಬಗ್ಗೆ

90 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಚನ್ನಪಟ್ಟಣದ ತಗಚಗೆರೆ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಮಳಿಗೆಗಳನ್ನು ತೆರೆಯುವ ಬಗ್ಗೆ ಸರ್ಕಾರವು ಆಶ್ವಾಸನೆ ನೀಡಿದೆಯೇ?
2. ಮೇಲಿನ ಯೋಜನೆಯು ಕಳೆದ ನಾಲ್ಕು ವರ್ಷಗಳಿಂದ ಬಾಕಿ ಉಳಿದಿರುವುದು ನಿಜವೇ?
3. ಹಾಗಿದ್ದಲ್ಲಿ, ಮೇಲಿನ ಸ್ಥಳದಲ್ಲಿ ಕೈಗಾರಿಕಾ ಮಳಿಗೆಗಳನ್ನು ಕಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮ.
4. ಎಂದು ಪ್ರಾರಂಭವಾಗುವುದು, ಹಾಗೂ ನಿಖರವಾದ ದಿನಾಂಕವನ್ನು ತಿಳಿಸುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):